International Journal of Academic Research
ISSN: 2348-7666; Vol.4, Issue-3 (1), March, 2017
Impact Factor: 4.535; Email: drtvramana@yahoo.co.in

# ಕರ್ನಾಟಕ ಪ್ರದೇಶದ ಮೇಲೆ ಪ್ರಾಕೃತ ಭಾಷೆಯ ಪ್ರಭಾವ

ಡಾ. ಟಿ. ಕುಮಾರಸ್ವಾಮಿ
ಇತಿಹಾಸ ವಿಭಾಗ
ಮೊ.ನಂ.8892949830

Email.drkumaraswamy82@gmail.com

ಜಗತ್ತಿನಲ್ಲಿ ಬದುಕಿದ ಮತ್ತು ಬದುಕುತ್ತಿರುವ ಎಲ್ಲಾ ಮನುಷ್ಯರಿಗೂ ಒಂದಲ್ಲ ಒಂದು ಭಾಷೆಯ ಜ್ಞಾನ ಇದ್ದೇ ಇರುತ್ತದೆ. ತಮ್ಮ ಭಾವನೆಗಳನ್ನು, ನೋವು ನಲಿವುಗಳನ್ನು ಆಚಾರ ವಿಚಾರಗಳನ್ನು ಅಂದರೆ ತಮ್ಮೊಳಗಿನ ಹಲವು ಸಂವೇದನೆಗಳನ್ನು ಹೊರಚೆಲ್ಲುವುದಕ್ಕೆ ಭಾಷೆ ಅನಿವಾರ್ಯ. ಮೊದಮೊದಲು ಭಾಷೆ ನಿರ್ದಿಷ್ಟವಾಗಿ ಉಚ್ಚಾರವಾಗದ ಸಂಕೇತಗಳ ಮೂಲಕ ಬಳಕೆಯಾಗುತ್ತಿತ್ತು. ಆಂಗಿಕ ಸಂಕೇತ ಮತ್ತು ಮೂಕ ಸಂಕೇತ ಅಂತಹವುಗಳಲ್ಲಿ ಮುಖ್ಯವಾಗಿದ್ದವು. ಕಾಲ ನಂತರದಲ್ಲಿ ಕೆಲ ಪದಗಳುಳ್ಳ ಧ್ವನಿ ಸಂಕೇತ ಬಳಸಲಾಗುತ್ತಿತ್ತು. ಇಂತ ಧ್ವನಿ ಸಂಕೇತಗಳು ದಿನಕಳೆದಂತೆ ಭಾಷಾ ಸ್ವರೂಪ ಪಡೆದುಕೊಂಡವು. ಭಾಷೆ ನಿರ್ದಿಷ್ಟ ರೂಪ ಪಡೆದುಕೊಂಡಿದ್ದು ಎಷ್ಟೋ ಶತಮಾನಗಳ ತರುವಾಯದ ನಂತರ ಆರಂಭಿಕ ಕರ್ನಾಟಕ ಪ್ರದೇಶದಲ್ಲಿ ಎಂಥ ಭಾಷೆಯಿತ್ತು ಎಂದು ನಿಖರವಾಗಿ ಹೇಳುವುದು ಅಸಾಧ್ಯ. ಆ ಕಾಲಘಟ್ಟದ ಸಂವಹನ ಮಾಧ್ಯಮವನ್ನು ಕೇವಲ ಕಲ್ಪಿಸಿಕೊಳ್ಳಬಹುದಷ್ಟೆ.

ಆದಿಮಾನವನಿಂದ ಆರಂಭವಾಗುವ ಈ ಪ್ರದೇಶದ ಇತಿಹಾಸ ಅತಿ ಪುರಾತನ ಕಾಲದ್ದಾಗಿದೆ. ಮೊದಮೊದಲು ಆ ಕಾಲಮಾನದ ಮಾನವರು ತಮ್ಮ ಸಂವಹನ ಮಾಧ್ಯಮವಾಗಿ ಆಂಗಿಕ ಸಂಕೇತಗಳನ್ನು ಬಳಸುತ್ತಿದ್ದಿರಬೇಕು. ಸುಧೀರ್ಘ ಶತಮಾನಗಳ ಕಾಲ ಈ ಪದ್ಧತಿ ಮುಂದುವರಿದಿರುವ ಸಾಧ್ಯತೆ ಇದೆ. ಕಾಲಾನುಕ್ರಮದಲ್ಲಿ ಮೂಕ ಸಂಕೇತ, ಧ್ವನಿ ಸಂಕೇತಗಳು ರೂಪ ಪಡೆದುಕೊಂಡಿರಬಹುದು. ಅಂದು ಗುಂಪಿನಲ್ಲಿ ಬದುಕಿದ ಮಾನವರಿಗೆ ಯಾವುದಾದರೂ ಒಂದು ಭಾಷೆ ಇರಲೇಬೇಕಿತ್ತು. ಬೇಟೆಗೆ ಜನರನ್ನು ಆಮಂತ್ರಿಸಲು, ದುಃಖ ದುಮ್ಮಾನಗಳನ್ನು ಹಂಚಿಕೊಳ್ಳಲು, ಅವರವರ ಗುಂಪಿಗೆ ಅರ್ಥವಾಗುವ ಭಾಷೆ ಆ ಕಾಲಮಾನಗಳಲ್ಲಿ ಜಾರಿಯಲ್ಲಿತ್ತು ಎಂದು ಹೇಳಬಹುದು. ಅಂದು ಅಸ್ತಿತ್ವದಲ್ಲಿದ್ದ ಎಲ್ಲಾ ಗುಂಪುಗಳಲ್ಲಿಯೂ ಒಂದೇ ಮಾದರಿಯ ಭಾಷೆ ಬಳಕೆಯಲ್ಲಿತ್ತು ಎಂದು ಹೇಳಲು ಯಾವುದೇ ಕುರುಹುಗಳಿಲ್ಲ. ಬಹುಶಃ ಪ್ರತಿಯೊಂದು ಗುಂಪುಗಳು ತಮಗೆ ಅರ್ಥವಾಗುವ ಅವರದೇ ಆದ ಭಾಷೆಗಳನ್ನು ಸೃಷ್ಟಿಸಿಕೊಂಡಿದ್ದವು. ಪ್ರದೇಶದಿಂದ ಪ್ರದೇಶಕ್ಕೆ ಸಮುದಾಯದಿಂದ ಸಮುದಾಯಕ್ಕೆ ಭಾಷಾ ಸಂಕೇತಗಳಲ್ಲಿ ಭಿನ್ನತೆ ಇದ್ದಿರಲೇಬೇಕು. ಇಂದಿಗೂ ಗಿರಿಜನರಲ್ಲಿ, ಬುಡಕಟ್ಟು ಜನರುಗಳಲ್ಲಿ ಅವರ ಸಮುದಾಯಗಳಿಗೆ ಮಾತ್ರ ತಿಳಿಯುವ ಭಾಷೆ ಬಳಕೆಯಲ್ಲಿರುವುದನ್ನು ಗಮನಿಸಬಹುದು. ಬುಡಕಟ್ಟು ಸಮುದಾಯಗಳಲ್ಲಿರುವ ಸಂವಹನ ಮಾಧ್ಯಮ ಇದಕ್ಕೆ ಸ್ಪಷ್ಟ ನಿದರ್ಶನ ಎಂದರೆ ತಪ್ಪಾಗಲಾರದು.

ಎಷ್ಟೋ ಯುಗಗಳು ಜಾರಿದ ನಂತರ ಮಾನವ ನಾಗರಿಕತೆಗಳು ವಿಕಾಸವಾಗತೊಡಗಿದವು. ಅದೇ ವೇಳೆಯಲ್ಲಿ ಅಲ್ಲಿನ ನಾಗರೀಕರಿಗೆ ಅನುಕೂಲವಾಗುವ ಭಾಷೆಯು ಕಾಲಾನುಕ್ರಮದಲ್ಲಿ ಬೆಳವಣಿಗೆ ಪಡೆದುಕೊಳ್ಳುತ್ತಿತ್ತು. ದಿನಗಳುರುಳಿದಂತೆ ಭಾಷಾ ಸಂಕೇತಗಳು ಬರವಣಿಗೆ ಸಂಕೇತಗಳಲ್ಲಿ ಬಂದಿಸಲ್ಪಡುತ್ತಿದ್ದವು. ಅಂದರೆ ಆ ಕಾಲಘಟ್ಟದ ಮಾನವರು ತಾವಾಡಿದ ಮಾತುಗಳು, ಮನದ ಭಾವನೆಗಳನ್ನು ದಾಖಲಿಸಲು ಯೋಚಿಸಿದ್ದಿರಬೇಕು. ಅವರ ಚಿಂತನೆಯ ಫಲವಾಗಿಯೇ ಬರವಣಿಗೆ ಸಂಕೇತ ಮತ್ತು ಲಿಪಿ (ಬರವಣಿಗೆ ಮಾಧ್ಯಮ)ಗಳು ಕಾಲಾನಂತರದಲ್ಲಿ ಜನ್ಮ ತಾಳಿದ್ದವು ಎನ್ನಬಹುದು. ಅಂದರೆ ಒಂದೊಂದು ಭಾಷೆಗೂ ಅದರದೇ ಆದ ಲಿಪಿಗಳು ಇದ್ದರೂ ಕೆಲವು ಭಾಷೆಗಳಿಗೆ ಸ್ವಂತ ಲಿಪಿ ಇಲ್ಲದಿರುವುದನ್ನು ಇಂದಿಗೂ ಸಹಾ ಗಮನಿಸಬಹುದು.

ಭಾರತದ ಸಂದರ್ಭದಲ್ಲಿ ಲಿಪಿಯ ಸೃಷ್ಟಿ ಯಾವಾಗ ಆರಂಭವಾಯಿತೆಂದು ನಿಖರವಾಗಿ ಹೇಳುವುದು ಕಷ್ಟಸಾಧ್ಯ. ಆದರೆ ಮೊದಲಿಗೆ ಭಾಷಾ ಸಂಕೇತಗಳು ಬರವಣಿಗೆ ಸಂಕೇತಗಳಲ್ಲಿ ಮೂಡಿ ಬಂದದ್ದು ಸಿಂಧೂ ನಾಗರಿಕತೆಯ ಸಂದರ್ಭದಲ್ಲಿ ಎಂದೇಳಲು ಯಾವುದೇ ಅಡ್ಡಿಯಿಲ್ಲ. ಪ್ರಪಂಚದ ಪ್ರಾಚೀನ ನಾಗರಿಕತೆಗಳಲ್ಲಿ ಸಿಂಧೂ ನಾಗರಿಕತೆಯೂ ಪ್ರಮುಖವಾದದ್ದು. ಸುಮಾರು ಕ್ರಿ.ಪೂ. 3000 ದಿಂದ 2000ದ ಅವಧಿಯವರೆಗೆ ಈ ನಾಗರಿಕತೆ ಪ್ರಗತಿಯಲ್ಲಿತ್ತು. ಇಲ್ಲಿನ ಜನರು ನಾಗರಿಕ ಜೀವನ ಅಳವಡಿಸಿಕೊಂಡು ಪ್ರಬುದ್ಧವಾಗಿ ಬದುಕ ಸಾಗಿಸಿದವರು. ವ್ಯವಸ್ಥಿತ ರಸ್ತೆಗಳು, ಸಾಲುಮನೆಗಳು, ಚರಂಡಿ ವ್ಯವಸ್ಥೆ, ಸ್ನಾನದಕೊಳ, ಉಗ್ರಾಣ ವ್ಯವಸ್ಥೆ ಮುಂತಾದವುಗಳು ಈ ನಾಗರಿಕತೆಯ ಅಭಿವೃದ್ಧಿಗೆ ಹಿಡಿದ ಕನ್ನಡಿ. ಸಿಂಧೂನದಿ ಬಯಲಿನಲ್ಲಿ ಲಭಿಸಿರುವ ಚಿತ್ರಿತ ಮುದ್ರೆಗಳು,

ಬಳಪದ ಕಲ್ಲಿನ ಫಲಕಗಳ ಮೇಲೆ ಬರವಣಿಗೆ ಸಂಕೇತಗಳು ಅಚ್ಚಾಗಿರುವುದು ಕಂಡುಬರುತ್ತದೆ. ಹೀಗೆ ಮೂಡಿಬಂದಿರುವ ಸಿಂಧೂ ಲಿಪಿಯೇ ಭಾರತದಲ್ಲಿ ಉಪಲಬ್ಧವಾಗಿರುವ ಅತ್ಯಂತ ಪ್ರಾಚೀನ ಲಿಪಿಯಾಗಿದೆ. ಹರಪ್ಪಾ, ಮಹೆಂಜೋದಾರೋ ಕಾಲಿಬಂಗನ್, ರೂಪರ್ ಮತ್ತು ಲೋಥಾಲ್ ಮುಂತಾದ ಸ್ಥಳಗಳಲ್ಲಿ ಈ ನಾಗರಿಕತೆಗೆ ಒಳಪಟ್ಟ ಬರವಣಿಗೆ ಸಂಕೇತಗಳುಳ್ಳ ಕುರುಹುಗಳು ಲಭ್ಯವಾಗಿವೆ. ವಿವಿಧ ನೆಲೆಗಳಲ್ಲಿ ಸುಮಾರು 2900 ಮುದ್ರೆಗಳು ಲಭಿಸಿದ್ದು, ಅವುಗಳಲ್ಲಿ 1164 ಮುದ್ರೆಗಳ ಮೇಲೆ ವಿವಿಧ ಪ್ರಾಣಿಗಳ ಚಿತ್ರ ಲಿಪಿಗಳು ಮೂಡಿಬಂದಿವೆ. ಸಿಂಧೂ ಬಯಲಿನ ನೆಲೆಗಳಲ್ಲಿ ಗೋಚರಿಸಿದ ಲಿಪಿಗೆ ಸಂಬಂಧಿಸಿದಂತೆ ಅನೇಕ ವಿದ್ವಾಂಸರು, ಚರಿತ್ರೆಕಾರರು ತಮ್ಮ ಅಭಿಪ್ರಾಯಗಳನ್ನು ತೆರೆದಿಟ್ಟಿದ್ದಾರೆ. ಅಂತಹವರಲ್ಲಿ ಎಸ್.ಆರ್.ರಾವ್, ಡಿ.ಎನ್.ಝಾ ಮತ್ತು ಐರಾವತನ್ ಮಹಾದೇವನ್‌ರವರು ಮುಖ್ಯರೆನಿಸುತ್ತಾರೆ. ಬಹುತೇಕ ವಿದ್ವಾಂಸರು ಈ ನೆಲೆಗಳಲ್ಲಿ ಕಂಡುಬಂದ ಲಿಪಿಗಳನ್ನು ಕುರಿತು ಮಹತ್ವಪೂರ್ಣ ಚರ್ಚೆಗಳನ್ನು ಮಾಡಿದ್ದಾರೆ. ಕೆಲವರು ಲಭಿಸಿರುವ ಬರವಣಿಗೆ ಸಂಕೇತಗಳನ್ನು ದ್ರಾವಿಡ ಮೂಲಕ್ಕೆ ಎಳೆದು ತಂದರೆ, ಹಲವು ವಿದ್ವಾಂಸರು ಸಂಸ್ಕೃತ ಭಾಷಾ ನೆಲೆಗೆ ಸೀಮಿತಗೊಳಿಸುತ್ತಾರೆ. ಇಲ್ಲಿ ಕಂಡುಬಂದ ಲಿಪಿಯ ಕುರಿತು ಸುದೀರ್ಘವಾದ ಚರ್ಚೆ ಜರುಗಿದರೂ ಸಹಾ ಇದುರೆಗೂ ಸರ್ವ ಸಮ್ಮತ ಏಕಾಭಿಪ್ರಾಯ ಫಲಿಸಲೇ ಇಲ್ಲ.

ಪ್ರಾಚೀನ ಕಾಲದಲ್ಲಿ ಸಿಂಧೂ ನಾಗರಿಕತೆಯಂತೆ ಉತ್ತುಂಗದಲ್ಲಿದ್ದ ಅನೇಕ ನಾಗರಿಕತೆಗಳು ಪ್ರಪಂಚದಾದ್ಯಂತ ಅಸ್ತಿತ್ವದಲ್ಲಿದ್ದವು ಅಂತಹ ನಾಗರಿಕತೆಗಳಲ್ಲಿಯೂ ಸಹ ಲಿಪಿ ಸಂಕೇತಗಳು ಬಳಕೆಯಲ್ಲಿದ್ದನ್ನು ಕಾಣಬಹುದು. ಹಿರೋಗ್ಲೀಫಿಕ್ ಚಿತ್ರ ಸಂಕೇತಗಳು ಈಜಿಪ್ಟ್ ನಾಗರೀಕತೆಯಲ್ಲಿಯೂ, ಕ್ಯೂನಿಫಾರಂ ಲಿಪಿ ಸಂಕೇತಗಳು ಮೆಸಪಟೋಮಿಯಾ ನಾಗರೀಕತೆಯ ಸಂದರ್ಭದಲ್ಲಿಯೂ ಅಸ್ತಿತ್ವದಲ್ಲಿದ್ದು ಬರವಣಿಗೆ ಸಂಕೇತಗಳು ಪುರಾತನ ನಾಗರಿಕತೆಗಳ ಸಾಮಾನ್ಯ ಲಕ್ಷಣಗಳಲ್ಲೊಂದಾಗಿದ್ದವು ಎಂಬುದು ಈ ಮೂಲಕ ತಿಳಿಯಬಹುದಾಗಿದೆ.

ವೇದಗಳ ಕಾಲದಿಂದಲೂ ಮೇಲ್ವರ್ಗದವರ ಸ್ವತ್ತಾಗಿದ್ದ ವಿದ್ಯೆ ಕಂಠಪಾಠ ಪದ್ಧತಿಯ ಮೂಲಕ ಸಾಗುತ್ತಿತ್ತು. ಎಲ್ಲಾ ಜನರಿಗೂ ಜ್ಞಾನ ಸಾರ್ವತ್ರಿಕವಾಗಬಾರದು ಎಂಬ ಕಾರಣದಿಂದ ವೈದಿಕರು ಈ ಕ್ರಮ ಅನುಸರಿಸುತ್ತಿದ್ದರು ಎಂದು ಭಾವಿಸಬಹುದು. ವೈದಿಕ ಕಾಲದ ಬೋಧನೆಯ ಯಾವ ಅಂಶಗಳು ಸಹಾ ಆ ಕಾಲದ ಬರವಣಿಗೆ ಗಡಿಗೆ ಸಿಲುಕಲೇ ಇರಲಿಲ್ಲ ವೇದಗಳು ಲಿಖಿತ ರೂಪ ಪಡೆದುಕೊಂಡದ್ದು ಎಷ್ಟೋ ಶತಮಾನಗಳ ಆ ನಂತರದಲ್ಲಿ.

ಸಮಸ್ತ ಜನರಿಗೂ ಯಾವ ಭೇದವಿಲ್ಲದೆ ಜ್ಞಾನ ವಿಸ್ತರಿಸಲು ಶ್ರಮಿಸಿದ ಮೊದಲಿಗ ಗೌತಮಬುದ್ಧ. ಅವನ ಪ್ರವಚನದ ಸಂಘದಲ್ಲಿ ಸರ್ವರಿಗೂ ಮುಕ್ತ ಪ್ರವೇಶವಿರುತ್ತಿತ್ತು. ಅಂದಿನ ಜನರಿಗೆ ಅರ್ಥವಾಗುವ (ಅರ್ಧಮಾಗದಿ) ಭಾಷೆಯಲ್ಲಿ ಅವನು ಪ್ರವಚನ ನೀಡುತ್ತಿದ್ದನು. ಇವನ ಪರಿನಿಬ್ಬಾಣದ ತರುವಾಯ ಅತನ ಅನುಯಾಯಿಗಳು ಬುದ್ಧ ಬೋಧಿಸಿದ ಅನೇಕ ವಿಚಾರಗಳನ್ನು ಲಿಖಿತವಾಗಿ ದಾಖಲೀಕರಣಗೊಳಿಸಿದರು. ಅವನನ್ನು ಅಪ್ಪಿಕೊಂಡ ಒಪ್ಪಿಕೊಂಡ ರಾಜರಂತೂ ಗೌತಮನ ಧರ್ಮದ ಬಗ್ಗೆ ಅಪಾರ ಪ್ರಮಾಣದಲ್ಲಿ ಔದಾರ್ಯ ತೋರಿದರು. ಅಂತಹ ಅರಸರಲ್ಲಿ ಮೌರ್ಯವಂಶಕ್ಕೆ ಸೇರಿದ ಅಶೋಕ ಚಕ್ರವರ್ತಿ ಬಹಳ ಪ್ರಮುಖನಾದವನು.

ಅಶೋಕನು ಧರ್ಮ ದೀಕ್ಷೆ ಸ್ವೀಕರಿಸಿದ ನಂತರ ದೇಶ ವಿದೇಶಗಳಲ್ಲಿ ಧರ್ಮವನ್ನು ಪ್ರಸರಿಸುವ ತೀರ್ಮಾನ ಕೈಗೊಂಡನು. ತಾನು ಆಯೋಜಿಸಿದ ಪಾಟಲೀಪುತ್ರದ ಬೌದ್ಧ ಸಮ್ಮೇಳನದ ತರುವಾಯ ನಾಡಿನ ವಿವಿಧೆಡೆಗಳಿಗೆ ಧರ್ಮ ಮಾರ್ಗಿಗಳನ್ನು ಧರ್ಮ ಪ್ರಚಾರಕ್ಕೆ ನಿಯೋಜಿಸಿದನು. ಬುದ್ಧ ಸಂದೇಶ ಹೊತ್ತ ಧರ್ಮ ಮಾರ್ಗಿಗಳೂ ದೇಶ ವಿದೇಶಗಳಿಗೆ ಹೋಗಿ ಧರ್ಮ ಪ್ರಚಾರ ಮಾಡಿದಂತೆ ಕರ್ನಾಟಕ ಪ್ರದೇಶದ ಮಹಿಷಮಂಡಲಕ್ಕೂ, ವನವಾಸಿಗೂ ಥೇರರು ಆಗಮಿಸಿದ್ದರು. ಈ ಸ್ಥಳಗಳಲ್ಲಿ ನೆರೆದಿದ್ದ ಸಾವಿರಾರು ಜನರು ಬುದ್ಧ ಧರ್ಮದ ಕುರಿತ ಬೋಧನೆಯನ್ನು ಆಲಿಸಿದರು. ಮಹಿಷ ಮಂಡಲದಲ್ಲಿ ಥೇರ ಮಹಾದೇವನ ಸಮ್ಮುಖದಲ್ಲಿ 40 ಸಾವಿರ ಜನ ಪಬ್ಬಜ ದೀಕ್ಷೆ ಪಡೆದುಕೊಂಡರೆ, ವನವಾಸಿಯಲ್ಲಿ ಥೇರ ರಕ್ಷಿತನ ನೇತೃತ್ವದಲ್ಲಿ ಬುದ್ಧನ ಸಂದೇಶಗಳನ್ನು ಗ್ರಹಣಕ್ಕೊಳಸಿಕೊಂಡ ಅರವತ್ತು ಸಾವಿರ ಜನರಲ್ಲಿ ಮುವತ್ತೇಳು ಸಾವಿರ ಜನ ಪಬ್ಬಜ್ಜ ದೀಕ್ಷೆ ಸ್ವೀಕರಿಸಿದರು[1] ಕರ್ನಾಟಕ ಪ್ರದೇಶದ ಆರಂಭಕಾಲದ ಚರಿತ್ರೆಗೆ ಸಂಬಂಧಿಸಿದಂತೆ ಈ ಘಟನೆಗಳು ತುಂಬಾ ಮಹತ್ವವಾದವುಗಳು ಎಂದು ಹೇಳಬಹುದು. ಈ ಎರಡು ಸ್ಥಳಗಳಲ್ಲಿ ಥೇರರ ಬೋಧನಾ

ಮಾಧ್ಯಮವಾಗಿ ಬಳಕೆಯಾದ ಭಾಷೆ ಪ್ರಾಕೃತವಾಗಿರಬೇಕು. ಏಕೆಂದರೆ ಅಶೋಕನ ಸಾಮ್ರಾಜ್ಯದ ಭಾಷೆ ಪ್ರಾಕೃತವಾಗಿದ್ದು ಅವನ ಬಹುತೇಕ ಶಾಸನಗಳು ಮೂಡಿಬಂದಿರುವುದು ಪ್ರಾಕೃತ ಭಾಷೆಯಲ್ಲಿಯೇ.

ಈ ಮೂಲಕ ಪ್ರಾಕೃತ ಭಾಷೆ ಅರ್ಥೈಸಿಕೊಳ್ಳಬಲ್ಲ ಸಾವಿರಗಟ್ಟಲೆ ಜನ ಕರ್ನಾಟಕ ಪ್ರದೇಶದಲ್ಲಿ ವಾಸಿಸುತ್ತಿದ್ದರು ಎಂದು ಹೇಳಬಹುದು. ಥೇರರ ಪ್ರಾಕೃತ ಭಾಷೆಯ ಬೋಧನೆ ಅರ್ಥವಾದುದರಿಂದಲೇ ಬಹುಮಂದಿ ಜನರು ಪರಿವರ್ತನ ಪಥದ ಕಡೆಗೆ ಸಾಗಿದ್ದು ಮೇಲಿನ ಅಂಶಗಳು ಸಾಹಿತ್ಯದ ನೆರಳಲ್ಲಿ ಅಂದಿನ ಭಾಷೆಯ ಕುರಿತು ಮಾಹಿತಿ ನೀಡುತ್ತವೆ. ಇವುಗಳೇ ಅಲ್ಲದೇ ಆ ಕಾಲಘಟ್ಟದಲ್ಲಿ ಈ ಪ್ರದೇಶಾದ್ಯಂತ ಕೆತ್ತಲ್ಪಟ್ಟ ಶಾಸನಗಳ ಹಿನ್ನೆಲೆಯಿಂದಲೂ ಆ ಸಂದರ್ಭದ ಭಾಷೆಯನ್ನು ತಿಳಿಯಬೇಕಾಗುತ್ತದೆ.

ಅಶೋಕ ಚಕ್ರವರ್ತಿ ತನ್ನ ಆಳ್ವಿಕೆಯ ಕಾಲದಲ್ಲಿ ಧಮ್ಮ ನುಡಿ ಹೊತ್ತ ಹಲವು ಶಾಸನಗಳನ್ನು ನಾಡಿನ ವಿವಿಧ ಸ್ಥಳಗಳಲ್ಲಿ ಶಿಲೆಗಳ ಮೇಲೆ ಕೆತ್ತಿಸಿದ್ದನು. ಅವನ ಒಟ್ಟು ಶಾಸನಗಳಲ್ಲಿ ಅದರಲ್ಲೂ ಲಘು ಶಿಲಾಶಾಸನಗಳಲ್ಲಿ ಅಧಿಕ ಶಾಸನಗಳು ಕರ್ನಾಟಕ ಪ್ರದೇಶದಲ್ಲೆ ನೆಲೆಗೊಂಡಿವೆ. ಅವನ ಪ್ರಭಾವಕ್ಕೊಳಗಾಗಿದ್ದ ಬಹುತೇಕ ಸ್ಥಳಗಳಲ್ಲಿ ಇಂದಿಗೂ ಗೋಚರಿಸುವ ಆ ಶಾಸನಗಳು ಅವನ ಕಾಲದ ಚರಿತ್ರೆಯ ಪ್ರತಿಬಿಂಬದಂತೆ ಕಂಗೊಳಿಸುತ್ತವೆ.

ಲಭ್ಯವಾಗಿರುವ ಅವನ ಶಾಸನಗಳನ್ನು ಶಿಲಾಶಾಸನಗಳು, ಗುಹಾಶಾಸನಗಳು, ಸ್ತಂಭಶಾಸನಗಳು ಎಂದು ವಿಭಜಿಸಲಾಗಿದೆ. ಇಲ್ಲಿನ ಬಹುತೇಕ ಶಾಸನಗಳು ಆ ಕಾಲಘಟ್ಟದಲ್ಲಿ ಚಲಾವಣೆಯಲ್ಲಿದ್ದ ವಿವಿಧ ಭಾಷೆಗಳಿಗೆ ಅನುಗುಣವಾಗಿ ಮೂಡಿಬಂದಿವೆ. ಬಹಳ ಮುಖ್ಯವಾಗಿ ಭಾರತದ ವಾಯುವ್ಯ ಭಾಗದಲ್ಲಿನ ಶಾಸನಗಳು ಗ್ರೀಕ್  ಅರಾಮ್ಯಕ್ (ಂಡಿಚಿಟಚಿಛಿ) ಭಾಷೆಯಲ್ಲಿ ರೂಪಿಸಲ್ಪಟ್ಟವೆ. ಸುಧಾಮ ವ್ಯಾಲಿ ಪರಿಸರದಲ್ಲಿ ಕಂಡುಬರುವ ಶಹಬಾಜ-ಗರಿ ಶಾಸನ ಇದಕ್ಕೆ ಉತ್ತಮ ನಿದರ್ಶನ ಎನ್ನಬಹುದು.[1] ಕರೋಷ್ಠಿ ಲಿಪಿ ಈ ಶಾಸನದಲ್ಲಿ ಬಳಕೆಯಾಗಿರುವ ಲಿಪಿಯಾಗಿದೆ. ಇಂದು ಪಾಕಿಸ್ತಾನ ರಾಷ್ಟ್ರವ್ಯಾಪ್ತಿಯಲ್ಲಿರುವ ಈ ಪ್ರದೇಶ ಅಶೋಕನ ಕಾಲದಲ್ಲಿ ಅವನ ಸಾಮ್ರಾಜ್ಯಕ್ಕೊಳಪಟ್ಟಿತ್ತು. ಭಾರತದಾದ್ಯಂತ ಕಂಡುಬಂದ ಬಹುತೇಕ ಶಾಸನಗಳು ಪಾಳಿ ಭಾಷೆಯವಗಳಾಗಿದ್ದು ಬ್ರಾಹ್ಮಿ ಲಿಪಿಯಿಂದ ಕಂಡರಿಸಲಾಗಿದೆ. ಕರ್ನಾಟಕ ಪ್ರದೇಶದಲ್ಲಿ ಕಂಡುಬಂದ ಶಾಸನಗಳು ಈ ಭಾಷೆ ಮತ್ತು ಲಿಪಿಯಿಂದ ಹೊರತಾಗಿಲ್ಲ. ಗುಲ್ಬರ್ಗಾ ಜಿಲ್ಲೆಯ ಸನ್ನತಿ,[2] ಕೊಪ್ಪಳ ಜಿಲ್ಲೆಯ ಗವಿಮಠ ಮತ್ತು ಪಾಲ್ಕಿಗುಂಡು,[4] ಚಿತ್ರದುರ್ಗ ಜಿಲ್ಲೆಯ ಜಟ್ಟಿಂಗ ರಾಮೇಶ್ವರ, ಬ್ರಹ್ಮಗಿರಿ ಮತ್ತು ಸಿದ್ದಾಪುರ,[5] ಬಳ್ಳಾರಿಜಿಲ್ಲೆಯ ಉದೇಗೊಳಂ ಮತ್ತು ನಿಟ್ಟೂರು,[6] ರಾಯಚೂರು ಜಿಲ್ಲೆಯ ಮಸ್ಕಿಗಳಲ್ಲಿ[7] ಅಶೋಕನ ಶಿಲಾಶಾಸನಗಳು ಇಂದಿಗೂ ರಾರಾಜಿಸುತ್ತವೆ. ಇವುಗಳಲ್ಲಿ ಬ್ರಹ್ಮಗಿರಿ, ಸಿದ್ಧಾಪುರ ಮತ್ತು ಜಟಿಂಗರಾಮೇಶ್ವರ ಶಾಸನಗಳು ವಿಶೇಷವೆನಿಸುತ್ತವೆ. ಈ ಶಾಸನಗಳು ಬ್ರಾಹ್ಮಿಲಿಪಿಯಿಂದ ಬರೆಯಲು ಪಟ್ಟದ್ದರು. ಇವುಗಳಲ್ಲಿನ ಕೊನೆಯ ಪದಗಳು ಕರೋಷ್ಠಿ ಪದದಿಂದ ಕೂಡಿವೆ.[8] ಇನ್ನುಳಿದ ಎಲ್ಲಾ ಶಾಸನಗಳು ಬ್ರಾಹ್ಮಿಲಿಪಿಯಲ್ಲಿ ಬರೆಯಲ್ಪಟ್ಟ ಪ್ರಾಕೃತ ಭಾಷೆಯ ಶಾಸನಗಳಾಗಿವೆ. ಈ ಶಿಲಾಬರಹಗಳ ಮೂಲಕ ಅಂದಿನ ಜನರಿಗೆ ಪ್ರಾಕೃತ ಭಾಷೆಯ ಅರಿವಿತ್ತು ಎಂದು ಹೇಳಬಹುದು.

ಆರಂಭಿಕ ಕರ್ನಾಟಕ ಪ್ರದೇಶದಲ್ಲಿ ಅಶೋಕನ ಶಾಸನಗಳೇ ಅಲ್ಲದೆ ಶಾತವಾಹನರ ಬಹುತೇಕ ಶಾಸನಗಳು ಕಂಡುಬಂದಿವೆ. ಈ ಮನೆತನವು ದಕ್ಷಿಣ ಭಾರತದ ಬಹುಭಾಗವನ್ನಾಳಿದ ಸಾಮ್ರಾಜ್ಯಗಳಲ್ಲಿ ಪ್ರಥಮವಾದದ್ದು. ಕರ್ನಾಟಕದ ಪ್ರದೇಶದ ಉತ್ತರ ಭಾಗದ ಅನೇಕ ಭಾಗದ ಮೇಲೆ ಇವರ ಆಡಳಿತದ ಪ್ರಭಾವವಿತ್ತು. ಹಲವು ಶಾಸನಗಳು, ನಾಣ್ಯಗಳು ಇಲ್ಲೆಲ್ಲಾ ಕಂಡುಬಂದಿದ್ದು ಇವರ ಆಡಳಿತದ ಪ್ರಭಾವವನ್ನು ಸಮರ್ಥಿಸುವ ಸಾಕ್ಷಿಗಳಾಗಿ ಉಳಿದಿವೆ. ಕ್ರಿ.ಶ. 2ನೇ ಶತಮಾನಕ್ಕೆ ಸೇರಿದ ಯುಟಚಿಜಿಡಿಞಚಿ, ಓಚಿಂಜಿಟುಞಚಿ, ಂಡಿಞಚಿ, ಅಜಿಣಞಚಿ ಎಂದು ಬರೆದ ಪ್ರಾಕೃತ ಶಾಸನ.[9] ಕ್ರಿ.ಶ. 2 ಮತ್ತು ಮೂರನೇ ಶತಮಾನಕ್ಕೆ ಸರಿಹೊಂದುವ ಗಿಥೀಟಿಞಥಿಶಿಣಚಿ ,ಎಡಿ (ಚಿ(ಣಚಿ) ಂಞಭಿಚಿಡಿಚಿಣಚಿಟುಞಚಿ (ಚಿ), ಒಚಿಞಛಿಚಿಣಞಚಿಡಿಞಛಿ ಂಣ-ಖಚಿಟಚಿ ಎಂದು ದಾಖಲಾಗಿರುವ ಬ್ರಾಹ್ಮಿಲಿಪಿ ಮತ್ತು ಪ್ರಾಕೃತ ಭಾಷೆಗಳನ್ನೊಳಗೊಂಡ ಶಾಸನ.[10] ಈ ವಂಶದ ಶಿವಶ್ರೀ ಪುಲುಮಾಯಿಯ ಪ್ರಾಕೃತ ಶಾಸನ.[11] ಶಾತಕರ್ಣಿಯ ಯುದ್ಧ ಮತ್ತು ವಿಜಯಗಳನ್ನು ತಿಳಿಸುವ ಪ್ರಾಕೃತ ಶಾಸನ.[12] ಮುಂತಾದವು ಸನ್ನತಿ ಪರಿಸರದಲ್ಲಿ ಕಂಡುಬಂದಿವೆ.

ಇವೇ ಅಲ್ಲದೇ ವಡಗಾಂ-ಮಾಧವಪುರದಲ್ಲಿಯು ಇವರಿಗೆ ಸಂಬಂಧಿಸಿದ ಕ್ರಿ.ಶ. ಒಂದನೇ ಶತಮಾನದ ಪ್ರಾಕೃತ ಶಾಸನ ಲಭ್ಯವಾಗಿವೆ.[13] ಧಾರವಾಡ ಜಿಲ್ಲೆಯ ವಾಸನ ಎಂಬಲ್ಲಿ ಈ ಅರಸರಿಗೆ ಸೇರಿದ ಕ್ರಿ.ಶ. 3ನೇ ಶತಮಾನದ ಶಾಸನ ದೊರೆತಿದೆ.[14]

ಅಂತೆಯೇ ಶಿಕಾರಿಪುರ ತಾಲ್ಲೂಕಿನ ಮಳವಳ್ಳಿ ಗ್ರಾಮದ ಕಲ್ಲೇಶ್ವರ ದೇವಸ್ಥಾನದ ಮುಂದಿನ ಕಂಬದ ಮೇಲೆಯೂ ಎರಡು ಪ್ರಾಕೃತ ಶಾಸನಗಳು ಕಂಡು ಬಂದಿವೆ.[15] ಈ ಪ್ರದೇಶದಲ್ಲಿ ಕಂಡುಬಂದು ಈ ಮನೆತನದವರು ಎಲ್ಲಾ ಶಾಸನಗಳು ಪ್ರಾಕೃತ ಭಾಷೆಯಲ್ಲಿದ್ದು ಬ್ರಾಹ್ಮಿ ಬರಹಗಳಲ್ಲಿ ದಾಖಲಾಗಿದೆ. ಈ ಶಾಸನಗಳ ಹಿನ್ನೆಲೆಯಿಂದ ಹೇಳುವುದಾದರೆ ಅಂದಿನ ಬಹು ಸಂಖ್ಯಾತ ಜನರು ಬ್ರಾಹ್ಮಿ ಲಿಪಿ ಮತ್ತು ಪ್ರಾಕೃತ ಭಾಷೆಯ ಪ್ರಭಾವಕ್ಕೊಳಗಾಗಿದ್ದರು ಎಂದು ಹೇಳಬಹುದು.

ಮುಂದುವರಿದು ಲಭಿಸಿದ ನಾಣ್ಯಗಳ ಆಧಾರದ ಮೇಲೆ ಅಂದಿನ ಭಾಷಾ ಪ್ರಭಾವ ಗುರುತಿಸಬಹುದು. ಆರಂಭಿಕ ಕಾಲಕ್ಕೆ ಸಂಬಂಧಿಸಿದಂತೆ ಅನೇಕ ಮನೆತನದವರ ನಾಣ್ಯಗಳು ಕರ್ನಾಟಕ ಪ್ರದೇಶದ ಪರಿಸರದಲ್ಲಿ ದೊರೆತಿವೆ. ಅಂತಹ ನಾಣ್ಯಗಳಲ್ಲಿ ಸ್ಥಳೀಯ ಅರಸರಾದ ಸದಕಣ ಕಲಲ್ಲಾಯ ಮಹಾರಟ್ಟಿಯ ನಾಣ್ಯ, ಚುಟುಕಾನಂದರ ನಾಣ್ಯ ಮತ್ತು ಮುಲಾನಂದರ ನಾಣ್ಯಗಳು ಪ್ರಮುಖವಾದವುಗಳು ಎನ್ನಿಸುತ್ತವೆ. ಚಿತ್ರದುರ್ಗ, ಕಾರವಾರ ಮುಂತಾದ ಪ್ರದೇಶಗಳಲ್ಲಿ ಈ ಅರಸರ ನಾಣ್ಯಗಳು ಕಂಡುಬಂದಿದ್ದು ಇವುಗಳ ಮೇಲೆ ಬ್ರಾಹ್ಮಿ ಅಕ್ಷರಗಳು ಮುದ್ರಣಗೊಂಡಿವೆ.[16] ಈ ನಾಣ್ಯಗಳ ಮುಖಾಂತರವೂ ಬ್ರಾಹ್ಮಿಲಿಪಿ ಕರ್ನಾಟಕ ಪ್ರದೇಶದ ಜನರ ಮೇಲೆ ಯಾವ ರೀತಿ ಪ್ರಭಾವ ಬೀರಿತು ಎಂಬುದನ್ನು ತಿಳಿದುಕೊಳ್ಳಬಹುದಾಗಿದೆ.

ಆರಂಭ ಕಾಲದಿಂದಲೂ ಕರ್ನಾಟಕ ಪ್ರದೇಶವನ್ನು ಪ್ರಭಾವಿಸಿದ ಬ್ರಾಹ್ಮಿ ಲಿಪಿ ಮುಂದೆ ಈ ಮಣ್ಣಿನಲ್ಲಿ ಹುಟ್ಟಿಕೊಂಡ ಕನ್ನಡ ಲಿಪಿಗೂ ಮೂಲಬೇರಾಗಿತ್ತು. ದಕ್ಷಿಣ ಭಾರತದ ಪ್ರಮುಖ ಭಾಷೆಗಳಾದ ತೆಲುಗು, ತಮಿಳು, ಮಲಯಾಳಂ ಮತ್ತು ಕನ್ನಡ ಲಿಪಿಗಳು ಹುಟ್ಟಿ ಬೆಳೆದಿದ್ದು ಬ್ರಾಹ್ಮಿಲಿಪಿಯಿಂದ ಎಂಬುದು ಸಾಬೀತಾಗಿರುವ ಅಂಶವಾಗಿದೆ. ಕ್ರಿ.ಶ. ನಾನೂರೈವತ್ತರ ಸುಮಾರಿಗೆ ಮೂಡಿ ಬಂದ ಹಲ್ಮಿಡಿ ಶಾಸನ ಪೂರ್ಣವಾಗಿ ಕನ್ನಡದಲ್ಲೇ ರಚಿತವಾಗಿದ್ದು ಕನ್ನಡದ ಮೊದಲ ಶಾಸನವೆಂಬ ಹೆಗ್ಗಳಿಕೆಗೆ ಒಳಗಾಗಿದೆ.[17] ಈ ಶಾಸನದಲ್ಲಿ ಕಂಡುಬಂದ ಲಿಪಿಗಳು ಏಕಾಏಕಿ ಆ ಸಂದರ್ಭಕ್ಕೆ ಹುಟ್ಟಿಕೊಂಡವಲ್ಲ. ಬದಲಾಗಿ ಆ ಲಿಪಿಗಳು ಜನ್ಯತಾಳಿ ಬೆಳವಣಿಗೆ ಕಾಣಲು ಹಲವು ಶತಮಾನಗಳ ಸಮಯ ತೆಗೆದುಕೊಂಡಿರಲು ಸಾಧ್ಯ. ಇದರ ಆಧಾರದ ಮೇಲೆ ಕ್ರಿ.ಶ. 3ನೇ ಶತಮಾನದ ಪೂರ್ವದಲ್ಲೇ ಕನ್ನಡ ಲಿಪಿ ಅಸ್ತಿತ್ವದಲ್ಲಿತ್ತು ಎಂದು ಊಹಿಸಬಹುದು. ಯಾವುದೇ ಲಿಪಿ ಜನ್ಮತಾಳುವ ಹಲವು ಶತಮಾನಗಳ ಮೊದಲೇ ಅದರ ಭಾಷೆ ಚಲಾವಣೆಯಲ್ಲಿರುತ್ತದೆ. ಹಾಗಾಗಿ ಆರಂಭಿಕ ಕರ್ನಾಟಕ ಪ್ರದೇಶದಲ್ಲಿ ಕನ್ನಡ ಭಾಷೆ ಯಾವಾಗ ಹುಟ್ಟಿಕೊಂಡಿತ್ತು ಎಂದು ನಿಖರವಾಗಿ ಹೇಳಲು ಸಾಧ್ಯವಿಲ್ಲದಿದ್ದರೂ ಕ್ರಿ.ಪೂರ್ವದ ಕೊನೆಯ ಶತಮಾನಗಳಲ್ಲಿ ಅಸ್ತಿತ್ವದಲ್ಲಿತ್ತು ಎಂದು ಹೇಳಬಹುದು. ಆರಂಭಿಕ ಕರ್ನಾಟಕ ಪ್ರದೇಶದ ಬಹುಭಾಗವನ್ನು ಆಳುತ್ತಿದ್ದ ವಡುಗರನ್ನು ಅನ್ಯ ಭಾಷಿಕರು ಎಂದು ಸಂಘಂ ಕವಿ ಮಾಮಲನಾರ್ ಕರೆದಿರುವುದು ಈ ಜನರು ತಮಿಳೇತರರಾಗಿದ್ದರು ಎಂದು ಗುರುತಿಸಲು ಸಾಧ್ಯ.[18] ಅಂತೆಯೇ ತಮಿಳು ನಾಡಿನ ಸಿತ್ತನವಾಸಲ್‌ನ ಏಳ್ಪಟ್ಟಿಯಂ ಗುಹೆಯಲ್ಲಿ ತಮಿಳು ಬ್ರಾಹ್ಮಿ ಶಾಸನ ಲಭಿಸಿದ್ದು ಅದರಲ್ಲಿರುವ ಅನೇಕ ಕನ್ನಡ ಪದಗಳನ್ನು
ಐ. ಮಹಾದೇವನ್‌ರವರು ಗುರುತಿಸಿದ್ದಾರೆ.[19] ಕುವಿಡ (ಗವುಡಿ), ಪೊಶಿಲ್ (ಹೊಸಿಲು), ತಾಯಿಯರ್ ಆ ಶಾಸನದಲ್ಲಿ ಗುರುತಿಸಲ್ಪಟ್ಟ ಪ್ರಮುಖ ಕನ್ನಡ ಪದಗಳು. ಈ ಶಾಸನದ ಕಾಲವನ್ನು ಕ್ರಿ.ಪೂ 1ನೇ ಶತಮಾನದ್ದು ಎಂದು ಈಗಾಗಲೇ ನಿರ್ಣಯಿಸಿರುವುದರಿಂದ ಇದರ ಆಧಾರದ ಮೇಲೆ ಆರಂಭಿಕ ಕರ್ನಾಟಕ ಪ್ರದೇಶದಲ್ಲಿ ಕನ್ನಡ ಭಾಷೆ ಕ್ರಿ.ಪೂ 1ನೇ ಶತಮಾನಕ್ಕಿಂತಲೂ ಪೂರ್ವದಲ್ಲಿ ಚಾಲ್ತಿಯಲ್ಲಿತ್ತು ಎಂಬ ತೀರ್ಮಾನಕ್ಕೆ ಬಂದು ನಿಲ್ಲಬಹುದು.

ಹೀಗೆ ಸಾಹಿತ್ಯ, ಶಾಸನ ಮತ್ತು ನಾಣ್ಯಗಳ ಹಿನ್ನೆಲೆಯಲ್ಲಿ ಆರಂಭಿಕ ಕರ್ನಾಟಕ ಪ್ರದೇಶದ ಜನರ ಮೇಲೆ ಬ್ರಾಹ್ಮಿಲಿಪಿ ಮತ್ತು ಪ್ರಾಕೃತ ಭಾಷೆ ಹೇಗೆ ಪ್ರಭಾವ ಬೀರಿದವು ಎಂಬುದನ್ನು ಈ ಮೂಲಕ ತಿಳಿದುಕೊಳ್ಳಲು ಪ್ರಯತ್ನಿಸಲಾಗಿದೆ.

## Reference books

1. Geiger Wilhelm (1912). The Mahavamsa or The Great Chronicle of Ceylon,1 Oxford University Press, London., P. 84
2. Alexander Cunningham (1877). Inscriptions of Asoka, Corpus Inscriptiomm indicarum, Vol-1, Office of the superintendent of Government Printing, Calcutta,., Page 43.
3. Joshi, M.C.( 1993). Indian archaeology 1988-89, A Review, Archaeological survey of India, Government of india, New Delhi,. Page 93.

4.ದೇವರ ದೇವರ ಕೊಂಡಾರೆಡ್ಡಿ (ಸಂ), ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–2, ಕೊಪ್ಪಳ ಜಿಲ್ಲೆ ಕನ್ನಡ ವಿಶ್ವವಿದ್ಯಾಲಯ, ಹಂಪಿ, 1999, ಪುಟ.37–38, 55.

5.Rice, B.L., Epigraphia Carnatika, Vol-2, Page 252.

6.ದೇವರ ಕೊಂಡಾರೆಡ್ಡಿ (ಸಂ), ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–1, ಬಳ್ಳಾರಿ ಜಿಲ್ಲೆ ಕನ್ನಡ ವಿಶ್ವವಿದ್ಯಾಲಯ, ಹಂಪಿ, 1998, ಪುಟ.124–126.

7.ದೇವರ ಕೊಂಡಾರೆಡ್ಡಿ (ಸಂ), ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ–7, ರಾಯಚೂರು ಜಿಲ್ಲೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2002, ಪುಟ. 161–162.

8. Amulya Chandra sen, Ashok's Edicts, Page.4-5.

9. Deshpande, M.N., Indian Archaeology 1966-67 – A Review, P-53.

10. Lal, B.B., Indian Archaeology, 1968-69 – A Review, Page.47

11 .Joshi, M.C., Indian Archaeology 1988-89 - A Review, Page.93.

12.Mahapatra, Indian Archaeology 1966-67- A Review, Page.53.

13 .Deshpande, M.N., Indian Archaeology, 1971-72 - A Review, Page.38.

14 .Debala Mittra, Indian Archaeology 1981-82,- A Reivew, Page.79.

15 .Rice, B.L., Epigraphica Carnatica, Vol.7, Page.325-26.

16 .Edward James Rapson, cata logue of the Indian Coins, Page. Cc ii, 57, 59, 60.

17. ಎಪಿಗ್ರಾಫಿಯ ಕರ್ನಾಟಕ, ಹಾಸನ ಜಿಲ್ಲೆ, ಸಂಪುಟ–9, ಹಾಸನ ಸಂಖ್ಯೆ–236

18 .Mamoolanar, Kurunthokai, Poem II.

19 .ಶೇಟರ್, ಷ., ಶಂಗಂ ತಮಿಳಗಂ ಮತ್ತು ಕನ್ನಡ ನಾಡು–ನುಡಿ, ಪುಟ. 143–145.